ಋ) ಸರ್ಕಾರಿ ಕಾಲೇಜು ಕಟ್ಟಡಗಳನ್ನು ದುರಸ್ತಿಗೊಳಿಸುವ ಉದ್ದೇಶವಿದೆ. ಆದರೆ, 2004–05ನೇ ಸಾಲಿನಲ್ಲಿ ಕಟ್ಟಡ ದುರಸ್ತಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ಒದಗಿಸಿರುವುದಿಲ್ಲ

1105 (763) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮಂಜೂರಾದ ಹಣ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) :

ಆ) ಕಳೆದ ಮೂರು ವರ್ಷಗಳಿಂದ ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಮಂಜೂರಾದ ಮನೆಗಳೆಷ್ಟು :

ಇ) ಖರ್ಚಾದ ಮತ್ತು ಉಳಿದ ಹಣ ಎಷ್ಟು ;

ಈ) ಸದರಿ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮಂಜೂರಾದ ವಸತಿಗಳನ್ನು ಪಡೆದ ಫಲಾನುಭವಿಗಳೆಷ್ಟು (ಫಲಾನುಭವಿಗಳ ವಿವರ ನೀಡುವುದು) :

ಉ) ಸದರಿ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ನಿರ್ಮಿಸದೇ ಮುಂಗಡವಾಗಿ ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಊ) ಹಾಗಿದ್ದಲ್ಲಿ, ಇಂತಹ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಅಂಜನಮೂರ್ತಿ (ವಸತಿ ಸಚಿವರು) :

ಅ) ರಾಯಚೂರು ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಅಂದರೆ 2001–02 ರಿಂದ 2003–04 ರವರೆಗೆ ಒಟ್ಟು ರೂ. 4443.360 ಹಣ ಬಿಡುಗಡೆಯಾಗಿದ್ದು, ರೂ. 4110.648 ಹಣ ಖರ್ಚಾಗಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಕ್ರ ಸಂ.	ತಾಲ್ಲೂಕು	ಬಿಡುಗಡೆಯಾದ ಹಣ	ಖರ್ಚಾದ ಹಣ
1.	ರಾಯಚೂರು	914.638	795.265
2.	ಮಾನ್ವಿ	1176.047	1144.887
3.	ದೇವದುರ್ಗ	1037.822	980.293
4.	ಲಿಂಗಸುಗೂರು	696.553	631.646
5.	ಸಿಂದನೂರು	618.300	558.557
ಒಟ್ಟು		4443.360	4110.648

ಆ) ಕಳೆದ ಮೂರು ವರ್ಷಗಳಲ್ಲಿ ಅಂದರೆ, 2001–02 ರಿಂದ 2003–04 ರವರೆಗೆ ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮಂಜೂರಾದ ಮನೆಗಳು, ಬಿಡುಗಡೆಯಾದ ಹಣ, ಖರ್ಚಾದ ಹಣ ಮತ್ತು ಉಳಿದ ಹಣದ ವಿವರ ಕೆಳಗಿನಂತಿದೆ.

ಇ) ಮಂಜೂರಾದ ಮನೆಗಳು	ಖರ್ಚಾದ ಹಣ	ಉಳಿದ ಹಣ (31.3.2004)
7416	980.293	57.529

ಈ) ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಕಳೆದ 3 ವರ್ಷಗಳಲ್ಲಿ 2001–02 ರಿಂದ 2003–04 ರಲ್ಲಿ ವಸತಿಗಳನ್ನು ಮಂಜೂರು ಮಾಡಿದ ಫಲಾನುಭವಿಗಳ ವಿವರ ಕೆಳಗಿನಂತಿದೆ

ಯೋಜನೆ	ಫಲಾನುಭವಿಗಳಿಗೆ ಮಂಜೂರಾದ ಮನೆಗಳ ಹಣ
ಆಶ್ರಯ	1529
ಅಂಬೇಡ್ಕರ್	468
ನಮಗ್ರಾಮ	600
ದೇವದಾಸಿ	93
ಎಸ್ ಸಿ ತಾಂಡ	521
ಜಿ.ಪಿ.ಹೆಚ್.ಪಿ.	2056
ಎ.ಸಿ.ಎ.	464
ಐ.ಎ.ವೈ. (ಹೊಸ)	1043
ಐ.ಎ.ವೈ. (ಉನ್ನತೀಕರಣ)	508
ಪಿ.ಎಂ.ಜಿ.ವೈ.	134
ಒಟ್ಟು	7415

ಉ) 2001–02 ರಿಂದ 2003–04 ರವರೆಗೆ ಮೇಲೆ ತೋರಿಸಿದ ವಸತಿ ಯೋಜನೆಗಳಡಿಯಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಮನೆಗಳನ್ನು ನಿರ್ಮಿಸದೆ ಮುಂಗಡವಾಗಿ ಹಣ ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಅನ್ವಯಿಸುವುದಿಲ್ಲ.

1106 (764) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜುಗಳೆಷ್ಟು ;

ಆ) ಇದರಲ್ಲಿ ಬೋಧಕ ಮತ್ತು ಬೋಧಕೇತರ ಕೊರತೆ ಇರುವುದು ನಿಜವೇ ; (ದರ್ಜೆವಾರು ವಿವರ ನೀಡುವುದು) ;

ಇ) ಸದರಿ ಕಾಲೇಜುಗಳಲ್ಲಿ ಶೌಚಾಲಯಗಳ ಕೊರತೆ ಇರುವುದು ನಿಜವೇ ;

ಈ) ಹಾಗಿದ್ದಲ್ಲಿ ಯಾವ ಕಾಲೇಜುಗಳಲ್ಲಿ ಶೌಚಾಲಯಗಳ ಕೊರತೆ ಇದೆ ;

ಉ) ಕೊರತೆಗಳನ್ನು ನೀಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು :

ಊ) ಹಾಗಿದ್ದಲ್ಲಿ ಯಾವಾಗ ಕೊರತೆಗಳನ್ನು ನೀಗಿಸಲಾಗುವುದು ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :